KACN020026952022

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ. ನ್ಯಾಯಾಲಯ, ಚಾಮರಾಜನಗರ.**

**ದಿನಾಂಕಃ 22ನೇ ಫೆಬ್ರವರಿ ಮಾಹೆ 2025**

**ಉಪಸ್ಥಿತರು**

**ಶ್ರೀ ಹೊನ್ನಸ್ವಾಮಿ ಬಿ . ಎಸ್., ಬಿ.ಎ. ಎಲ್.ಎಲ್. ಎಂ.,**
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.**
**ಚಾಮರಾಜನಗರ.**

**ಸಿ ಸಿ ಸಂ. 1640/2022**

| | |
|---|---|
| **ಫಿರ್ಯಾದುದಾರರು:** | **ಸರ್ಕಾರದ ಪರವಾಗಿ ಗ್ರಾಮಾಂತರ ಪೊಲೀಸ್ ಠಾಣೆ.**<br>ಚಾಮರಾಜನಗರ<br>(ಪ್ರತಿನಿಧಿಸುವವರು ಸಹಾಯಕ ಸರ್ಕಾರಿ ಅಭಿಯೋಜಕರು) |

**:: ವಿರುದ್ಧ ::**

| | |
|---|---|
| **ಆರೋಪಿ:** | **ಉಮೇಶ**<br>ಬಿನ್ ಲೇಟ್. ಮಹದೇವಯ್ಯ<br>ವಯಸ್ಸು 40 ವರ್ಷ,<br>ವಾಸಃ ಕಲ್ಲಹಳ್ಳಿ ಗ್ರಾಮ,<br>ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ.<br>**(ಆರೋಪಿ ಪರಃ ಶ್ರೀ ಕೆ.ಪಿ.ಎನ್ ವಕೀಲರು)** |

**ಘಟನೆಗಳ ವಿವರಃ**

| | | |
|---|---|---|
| ಪ್ರಕರಣ ದಾಖಲಾದ ದಿನಾಂಕ | : | 09.06.2021 |
| ಪ್ರಕರಣದ ಸ್ವರೂಪ | : | ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 32, 34 |

| | | |
|---|---|---|
| ವಿಚಾರಣೆ ಪ್ರಾರಂಭವಾದ ದಿನಾಂಕ | : | 04.08.2023 |
| ವಿಚಾರಣೆ ಮುಕ್ತಾಯವಾದ ದಿನಾಂಕ | : | 29.12.2023 |
| ತೀರ್ಪು ನೀಡಿದ ದಿನಾಂಕ | : | **22.02.2025** |
| ಪ್ರಕರಣದ ಒಟ್ಟು ಕಾಲಾವಧಿ | : | ವರ್ಷ ತಿಂಗಳು ದಿನ<br>3 8 13 |

**:: ತೀರ್ಪು ::**

ಆರೋಪಿ ವಿರುದ್ದ ಗ್ರಾಮಂತರ ಪೊಲೀಸ್ ಠಾಣೆ, ಚಾಮರಾಜನಗರ ರವರು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 32, 34 ರ ಅಡಿಯಲ್ಲಿ ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರಗಳು ಈ ಕೆಳಕಂಡಂತಿರುತ್ತದೆ.**

ದಿನಾಂಕ:09-06-2021 ರಂದು ಬೆಳಿಗ್ಗೆ 07-15 ಗಂಟೆಗೆ ಕಲ್ಲಹಳ್ಳಿ ಗ್ರಾಮದ ಸಾರ್ವಜನಿಕ ಬಸ್ ನಿಲ್ದಾಣದ ಮುಂಭಾಗದ ರಸ್ತೆಯಲ್ಲಿ ಆರೋಪಿಯು ಒಂದು ಬಿಳಿ ಪ್ಲಾಸ್ಟಿಕ್ ಚೀಲದಲ್ಲಿ 90 ಎಂ.ಎಲ್ ನ ಓರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ ಮದ್ಯತುಂಬಿರುವ ಒಟ್ಟು 10 ಟೆಟ್ರಾಪ್ಯಾಕ್ ಮತ್ತು 90 ಎಂ.ಎಲ್ ನ ಹೈವಾರ್ಡ್ಸ್ ಚಿಯರ್ಸ್ ವಿಸ್ಕಿಯ ಮದ್ಯತುಂಬಿರುವ ಒಟ್ಟು 20 ಟೆಟ್ರಾಪ್ಯಾಕ್ ಗಳನ್ನು ತುಂಬಿಕೊಂಡು ಯಾವುದೇ ರಹದಾರಿ ಇಲ್ಲದೆ, ಅಕ್ರಮವಾಗಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಚೀಲವನ್ನು ಕೈಯಲ್ಲಿ ಹಿಡಿದು ನಡೆದುಕೊಂಡು ಹೋಗುತ್ತಿದ್ದದ್ದು ತನಿಖೆ ಹಾಗೂ ಸಾಕ್ಷ್ಯಧಾರಗಳಿಂದ ದೃಢಪಟ್ಟಿರುವುದರಿಂದ ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆಯವರು ಅಪರಾಧ ಸಂಖ್ಯೆ 85/2021 ರಂತೆ ಪ್ರಕರಣವನ್ನು ನೋಂದಾಯಿಸಿ ನಂತರ ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

3.ತನಿಖಾಧಿಕಾರಿಯು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ನಂತರ ನ್ಯಾಯಾಲಯವು ಸದರಿ ಪ್ರಕರಣದಲ್ಲಿ ಆರೋಪಿ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 32, 34 ರಡಿಯಲ್ಲಿ ಸಂಜ್ಞೆಯನ್ನು ತೆಗೆದುಕೊಂಡಿರುತ್ತದೆ.

4. ಆರೋಪಿ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆ ಯಾಗಿರುತ್ತಾರೆ. ಆರೋಪಿತರಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಅಡಿಯಲ್ಲಿ ಅಭಿಯೋಜನೆಯ ದಾಖಲೆಗಳನ್ನು ಪೂರೈಸಲಾಗಿದೆ. ನಂತರ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 1965 ರ ಕಲಂ 32, 34 ರ ಅಡಿಯಲ್ಲಿ ಆರೋಪಿ ವಿರುದ್ಧ ಆಪಾದನೆಯನ್ನು ರಚಿಸಿ ಓದಿ ಹೇಳಲಾಗಿರುತ್ತದೆ. ಆರೋಪಿ ತಪ್ಪನ್ನು ಒಪ್ಪಿಕೊಳ್ಳದೇ ವಿಚಾರಣೆಯಾಗಬೇಕೆಂದು ತಿಳಿಸಿರುತ್ತಾರೆ.

5. ನಂತರ ಅಭಿಯೋಜನೆಯವರು ತಮ್ಮ ಪರ ಪ್ರಾಸಾ 1 ರಿಂದ 4 ರವರೆಗೆ ನ್ಯಾಯಾಲಯದ ಮುಂದೆ ವಿಚಾರಣೆ ಮಾಡಿಕೊಂಡು, ನಿಪಿ 1 ರಿಂದ 5 ರವರೆಗೆ ನಿಶಾನೆಗಳನ್ನಾಗಿ ಹಾಗೂ 30 ಮದ್ಯದ ಟೆಟ್ರಾ ಪ್ಯಾಕ್ ಗಳನ್ನು ಹಾಗೂ ಬಿಳಿ ಪ್ಲಾಸ್ಟಿಕ್ ಚೀಲವನ್ನು ಮುದ್ದೆ ಮಾಲು-1 ಮತ್ತು 2 ಎಂದು ಗುರ್ತಿಸಿಕೊಂಡಿರುತ್ತಾರೆ. ಪ್ರಾಸಾ-3 ಮತ್ತು 4 ರವರು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಆರೋಪಿಯ ವಿರುದ್ಧ ದಂ.ಪ್ರ.ಸಂ.ಕಲಂ 313 ರ ರೀತ್ಯಾ ಪಡೆದುಕೊಳ್ಳಬೇಕಾದ ಆರೋಪಿ ಹೇಳಿಕೆಯನ್ನು ತೆಗೆದುಕೊಳ್ಳಲಾಯಿತು, ಆರೋಪಿಯು ಸಾಕ್ಷ್ಯದಾರರು ನುಡಿದಿರುವ ಸಾಕ್ಷ್ಯವನ್ನು ಅಲ್ಲಗಳೆದಿರುತ್ತಾರೆ. ಆರೋಪಿ ತಮ್ಮ ಪರವಾಗಿ ಸಾಕ್ಷಿಯನ್ನು ಮಂಡಿಸಿರುವುದಿಲ್ಲ ಮತ್ತು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ.

6. ಅಭಿಯೋಜನೆ ಹಾಗೂ ಆರೋಪಿ ಪರವಾಗಿ ವಾದವನ್ನು ಆಲಿಸಲಾಯಿತು. ಕೆಳಕಂಡ ಅಂಶಗಳು ಪ್ರಕರಣದ ಇತ್ಯರ್ಥಕ್ಕಾಗಿ ಮೂಡಿಬಂದಿತು.

1. ದಿನಾಂಕ:09-06-2021 ರಂದು ಬೆಳಿಗ್ಗೆ 07-15 ಗಂಟೆಗೆ ಕಲ್ಲಹಳ್ಳಿ ಗ್ರಾಮದ ಸಾರ್ವಜನಿಕ ಬಸ್ ನಿಲ್ದಾಣದ ಮುಂಭಾಗದ ರಸ್ತೆಯಲ್ಲಿ ಆರೋಪಿಯು ಒಂದು ಬಿಳಿ ಪ್ಲಾಸ್ಟಿಕ್ ಚೀಲದಲ್ಲಿ 90 ಎಂ.ಎಲ್ ನ ಓರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ ಮಧ್ಯತುಂಬಿರುವ ಒಟ್ಟು 10 ಟೆಟ್ರಾಪ್ಯಾಕ್ ಮತ್ತು 90 ಎಂ.ಎಲ್ ನ ಹೈವಾರ್ಡ್ಸ್ ಚಿಯರ್ಸ್ ವಿಸ್ಕಿಯ ಮಧ್ಯತುಂಬಿರುವ ಒಟ್ಟು 20 ಟೆಟ್ರಾಪ್ಯಾಕ್ ಗಳನ್ನು ತುಂಬಿಕೊಂಡು ಯಾವುದೇ ರಹದಾರಿ ಇಲ್ಲದೆ, ಅಕ್ರಮವಾಗಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಚೀಲವನ್ನು ಕೈಯಲ್ಲಿ ಹಿಡಿದು ನಡೆದುಕೊಂಡು ಹೋಗುತ್ತಿದ್ದಾರೆಂದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯಿದೆ ಕಲಂ. 32 ಮತ್ತು 34 ರಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿರುವುದಾಗಿ ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುವರೇ?

2. ಯಾವ ಆದೇಶ?

7. ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.

ಅಂಶ ಸಂಖ್ಯೆ : 1 :ನಕರಾತ್ಮಕವಾಗಿ.

ಅಂಶ ಸಂಖ್ಯೆ : 2 : ಅಂತಿಮ ಆದೇಶದಂತೆ

ಈ ಕೆಳಕಂಡ ಕಾರಣಗಳಿಗಾಗಿ,

## ಕಾರಣಗಳು

8. **ಅಂಶ ಸಂಖ್ಯೆ: 1** : ಅಭಿಯೊಜನೆಯವರು ಆರೊಪಿಯ ಮೇಲೆ ಇರುವ ಆರೋಪವನ್ನು ಸಾಬೀತು ಪಡಿಸಲು ಅಭಿಯೋಜನೆಯವರು ತಾವು ಹಾಜರು ಪಡಿಸಿದ ಸಾಕ್ಷಿದಾರರ ಪಟ್ಟಿಯಲ್ಲಿನ ತಮ್ಮ ಪರ ಫ್ರಾಸಾ 1 ರಿಂದ 4 ರವರೆಗೆ ನ್ಯಾಯಾಲಯದ ಮುಂದೆ ವಿಚಾರಣೆ ಮಾಡಿಕೊಂಡು, ನಿಪಿ 1 ರಿಂದ 5 ರವರೆಗೆ ನಿಶಾನೆಗಳನ್ನಾಗಿ ಹಾಗೂ ಮಧ್ಯದ ಟೆಟ್ರಾ ಪ್ಯಾಕ್ ಗಳನ್ನು ಹಾಗೂ ಬಿಳಿ ಪ್ಲಾಸ್ಟಿಕ್ ಚೀಲವನ್ನು ಮುದ್ದೆ ಮಾಲು-1 ಮತ್ತು 2 ಎಂದು ಗುರ್ತಿಸಿಕೊಂಡಿರುತ್ತಾರೆ. ನಿಪಿ.1 ಸ್ಥಳ ಮಹಜರ್,

ನಿಪಿ.2 ಮತ್ತು 3 ರ ಹೇಳಿಕೆಗಳು. ನಿಪಿ.4 ಸ್ವ-ವರದಿ ಹಾಗೂ ನಿಪಿ.5 ರಾಸಾಯನಿಕ ರಾಸಾಯನಿಕ ವಿಶ್ಲೇಷಣಾ ವರದಿಯಾಗಿರುತ್ತದೆ.

**9.** ಫ್ರಾಸಾ -1 ಮತ್ತು 2 ರವರು ತಮ್ಮ ನುಡಿ ಸಾಕ್ಷಿಯಲ್ಲಿ ಆರೋಪಿ ತಮಗೆ ಗೊತ್ತಿದೆ. ಆತ ಒಂದೆ ಊರಿನವರು, ಈ ಕೇಸಿನ ಬಗ್ಗೆ ತಮಗೇನೂ ಗೊತ್ತಿಲ್ಲ.2-3 ವರ್ಷಗಳ ಹಿಂದೆ ಪೊಲೀಸ್ ಠಾಣೆಯಲ್ಲಿ ಸಹಿ ಹಾಕಿದ್ದೆ, ಅದರಲ್ಲಿ ಏನು ಬರೆದಿದೆ ತನಗೆ ಗೊತ್ತಿಲ್ಲ. ಪೊಲೀಸರು ಪಂಚನಾಮೆ ಬರೆದು ಮದ್ಯದ ಪ್ಯಾಕೆಟ್‌ಗಳನ್ನು ವಶಪಡಿಸಿಕೊಂಡಿಲ್ಲ. ನ್ಯಾಯಾಲಯ ಮುಂದಿರುವ ಮುದ್ದೆಮಾಲುಗಳನ್ನು ಈ ಹಿಂದೆ ನೋಡಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಸಾಕ್ಷಿದಾರರಿಗೆ ನಿಪಿ.1 ರ ಪಂಚನಾಮೆಯಲ್ಲಿರುವ ಸಹಿಯನ್ನು ನಿಪಿ-1(ಎ) ಮತ್ತು ನಿಪಿ.1(ಬಿ) ಎಂದು ಗುರುತಿಸಿಕೊಂಡಿರುತ್ತಾರೆ.

**10.** ಫ್ರಾಸಾ-3 ರವರು ತಮ್ಮ ನುಡಿ ಸಾಕ್ಷಿಯಲ್ಲಿ ದಿನಾಂಕಃ 09.06.2021 ರಂದು ಬೆಳಿಗ್ಗೆ 6.45 ಗಂಟೆ ಸಮಯದಲ್ಲಿ ಠಾಣಾ ಸಿಬ್ಬಂದಿಯವರಾದ ಚಾಸಾ-4 ರಿಂದ 6 ರವರ ಜೊತೆ ಕೋವಿಡ್-19 ಸಂಬಂಧ ಬೆಳಿಗ್ಗೆ 7.00 ಗಂಟೆ ಸಮಯದಲ್ಲಿ ಕಲ್ಲಹಳ್ಳಿ ಗ್ರಾಮದ ಬಳಿ ಗಸ್ತಿನಲ್ಲಿದ್ದಾಗ ಬಂದ ಖಚಿತ ಮಾಹಿತಿ ಏನೆಂದರೆ, ಮರಿಯಾಲದ ಕಡೆಯಿಂದ ಕಲ್ಲಹಳ್ಳಿ ಗ್ರಾಮದ ಕಡೆಗೆ ಒಬ್ಬ ಅಸಾಮಿಯೂ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಅಕ್ರಮವಾಗಿ ಮದ್ಯದ ತುಂಬಿದ ಪೌಚ್‌ಗಳನ್ನು ಸಾಗಾಣಿಕೆ ಮಾಡುತಿದ್ದಾನೆ ಎಂದು ಬಂದ ಮಾಹಿತಿ ಮೇರೆಗೆ, ಠಾಣಾ ಸಿಬ್ಬಂದಿಗಳಾದ ಚಾಸಾ-4 ರಿಂದ 6 ರವರನ್ನು ಕರೆದುಕೊಂಡು ಮಾರ್ಗ ಮಧ್ಯದಲ್ಲಿ ಪಂಚರಾದ ಚಾಸಾ-2 ಮತ್ತು 3 ರವರನ್ನು ಪಂಚರಾಗಲು ಮನವಿ ಮಾಡಿಕೊಂಡು ಅವರು ಒಪ್ಪಿದ ಮೇರೆಗೆ ಅವರನ್ನು ಕಛೇರಿಯ ಇಲಾಖಾ ಜೀಪಿನಲ್ಲಿ ಕರೆದುಕೊಂಡು ಕಲ್ಲಹಳ್ಳಿ ಬಸ್ ನಿಲ್ದಾಣದ ಬಳಿ ಹೋಗಿ ಜೀಪನು ಮರೆಯಾಗಿ ನಿಲ್ಲಿಸಿ ಕಾಯುತ್ತಿದ್ದಾಗ, ಬೆಳಿಗ್ಗೆ 7.15 ಗಂಟೆ ಸಮಯದಲ್ಲಿ ಒಬ್ಬ ಅಸಾಮಿಯು ಒಂದು ಪ್ಲಾಸ್ಟಿಕ್

ಚೀಲವನ್ನು ಹಿಡಿದುಕೊಂಡು ಬರುತ್ತಿದ್ದು, ಆತನನ್ನು  ಸಿಬ್ಬಂದಿಗಳ ಸಹಾಯದಿಂದ ಸುತ್ತುವರಿದು ಹಿಡಿದು ಆತನ ಹೆಸರು, ವಿಳಾಸ ವಿಚಾರಿಸಲಾಗಿ, ಉಮೇಶ್ ಬಿನ್ ಮಹದೇವಯ್ಯ 40 ವರ್ಷ, ಕಲ್ಲಹಳ್ಳಿ ಗ್ರಾಮ ಎಂದು ತಿಳಿಸಿರುತ್ತಾನೆ. ನಂತರ ಚೀಲದಲ್ಲಿ ಏನಿದೆ ಎಂದು ವಿಚಾರಿಸಲಾಗಿ, ಮದ್ಯೆ ತುಂಬಿದ ಪೌಚ್ ಗಳಿರುವುದಾಗಿ ತಿಳಿಸಿದ್ದು, ಅವುಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿದ್ದ ಬಗ್ಗೆ ತಿಳಿಸಿರುತ್ತಾನೆ. ನಂತರ ರಹದಾರಿ ಮತ್ತು ಬಿಲ್ಲು ಇದೇಯೇ ಎಂದು ಕೇಳಲಾಗಿ ಇಲ್ಲ ಎಂದು ತಿಳಿಸಿದ್ದು, ಎಲ್ಲಿಂದ ತಂದೆ ಎಂದು ಕೇಳಲಾಗಿ, ಆತನು ಹೇಳಲು ನಿರಾಕರಿಸಿರುತ್ತಾನೆ. ನಂತರ ಪಂಚರ ಸಮಕ್ಷಮ ಆತನ ಬಳಿ ಇದ್ದ ಚೀಲವನ್ನು ಪರಿಶೀಲಿಸಲಾಗಿ 90 ಎಂ.ಎಲ್.ನ ಓರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ 10 ಪೌಚ್‌ಗಳಿದ್ದು ಹಾಗೂ 90 ಎಂ.ಎಲ್.ನ ಹೈವಾರ್ಡ್ಸ್ ಚಿಯರ್ಸ್ ವಿಸ್ಕಿಯ 20 ಪೌಚ್ ಗಳಿದ್ದು, ಈ ಪೌಚ್ ಗಳ ಒಂದು ಬದಿಯಲ್ಲಿ ಎಂ.ಆರ್.ಪಿ. 35.13, ಮತ್ತೊಂದು ಬದಿಯಲ್ಲಿ ಅಬಕಾರಿ ಕಮೀಷನರ್ ರವರ ಸಹಿ ಇರುವ ಲೇಬಲ್‌ನ್ನು ಅಂಟಿಸಲಾಗಿರುತ್ತದೆ. ಇವುಗಳ ಒಟ್ಟು ಬೆಲೆ ರೂ. 1050/- ಆಗಿರುತ್ತದೆ. ನಂತರ 30 ಪೌಚ್ ಗಳನ್ನು ಪ್ರತ್ಯೇಕವಾಗಿ ತೆಗೆದು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ "B" ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲು ಮಾಡಲಾಯಿತು. ತನ್ನ  ಮತ್ತು ಪಂಚರ ಸಹಿವುಳ್ಳ ಚೀಟಿಯನ್ನು ಪೌಚ್‌ಗಳ ಮೇಲೆ ಅಂಟಿಸಲಾಯಿತು. ಈ ಮಹಜರನ್ನು ಬೆಳಿಗ್ಗೆ 7.20 ರಿಂದ 8.20 ರವರೆಗೆ ಬರೆಯಲಾಯಿತು. ನಂತರ ಆರೋಪಿ ಮತ್ತು ಮುದ್ದೆಮಾಲನ್ನು ವಶಪಡಿಸಿಕೊಂಡು ಬೆಳಿಗ್ಗೆ 9.00 ಗಂಟೆಗೆ ಠಾಣೆಗೆ ಬಂದು ವರದಿ ತಯಾರಿಸಿ, ಮುಂದಿನ ಕ್ರಮದ ಬಗ್ಗೆ ಮುದ್ದೆಮಾಲು ಅಸಲು ಮಹಜರ್ ಹಾಗೂ ಆರೋಪಿಯನ್ನು ವರದಿಯೊಂದಿಗೆ ಚಾಸಾ-8 ರವರಿಗೆ ನೀಡಿರುತ್ತೇನೆ. ಪಂಚನಾಮೆಯನ್ನು ನಿಪಿ-1  ರಲ್ಲಿರುವ ಸಹಿಯನ್ನು ನಿಪಿ-1(ಸಿ),  ಸ್ವ-ವರದಿಯನ್ನು ನಿಪಿ-4 ಹಾಗೂ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಿಕೊಂಡಿರುತ್ತಾರೆ.  30 ಟೆಟ್ರಾ ಪ್ಯಾಕ್‌ಗಳನ್ನು ಒಟ್ಟಾಗಿ ಮು.ಮಾ.-1   ಹಾಗೂ ಪ್ಲಾಸ್ಟಿಕ್ ಬಿಳಿ ಚೀಲವನ್ನು ಮು.ಮಾ-2 ಎಂದು

ಗುರುತಿಸಿಕೊಂಡಿರುತ್ತಾರೆ ಹಾಗೂ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ ಎಂದು ತಮ್ಮ ಸಾಕ್ಷಿ ನುಡಿದಿರುತ್ತಾರೆ.

ಆರೋಪಿ ಪರ ವಕೀಲರ ಪಾಟೀ ಸವಾಲಿನಲ್ಲಿ ಬೆಳಿಗ್ಗೆ 6.30 ಗಂಟೆಗೆ ಠಾಣೆಯನ್ನು ಬಿಟ್ಟೆ ಅದನ್ನು ದಿನಚರಿಯಲ್ಲಿ ಕಾಣಿಸಿದ್ದೇನೆ. ದಿನಚರಿಯನ್ನು ಹಾಜರುಪಡಿಸಲು ಅಗತ್ಯವಿಲ್ಲ, ಅದನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಎಂದು ನುಡಿರುತ್ತಾರೆ. ಬಸ್ ನಿಲ್ದಾಣದಲ್ಲಿ ಯಾವುದೇ ಪ್ರಯಾಣಿಕರು ಇರಲಿಲ್ಲ. ಆರೋಪಿಯನ್ನು ಅದಕ್ಕಿಂತ ಪೂರ್ವದಲ್ಲಿ ನ ತಾನು ನೋಡಲಿಲ್ಲ. ಆರೋಪಿಯು ಒಂದು ಬಿಳಿ ಚೀಲದಲ್ಲಿ ಪೌಚ್ ಗಳನ್ನು ಹಿಡಿದುಕೊಂಡು ಬರುತ್ತಿದ್ದಾನೆ ಎಂದು ಮಾಹಿತಿ ಬಂದಿತ್ತು. ನಿಪಿ-1 ರಲ್ಲಿ ಬ್ಯಾಚ್ ಸಂಖ್ಯೆ ಹಾಗೂ ತಯಾರು ಮಾಡಿದ ಸಂಖ್ಯೆಯನ್ನು ನಮೂದು ಮಾಡಲು ಯಾವುದೇ ತೊಂದರೆ ಇರಲಿಲ್ಲ. ನಿಪಿ-1 ರಲ್ಲಿ ಅವುಗಳನ್ನು ಬ್ಯಾಚ್ ಸಂಖ್ಯೆ ಹಾಗೂ ತಯಾರು ಮಾಡಿದ ಸಂಖ್ಯೆಯನ್ನು ಕಾಣಿಸಲಿಲ್ಲ ಎಂಬ ಅಂಶವನ್ನು ಒಪ್ಪಿಕೊಂಡಿದ್ದಾರೆ. ಚಾಸಾ-4 ರವರು ನಿಪಿ-1 ನ್ನು ಬರೆದರು. ನಿಪಿ-1 ರಲ್ಲಿ ಎರಡು ಸಾಕ್ಷಿದಾರರ ನಡುವೆ ಜಾಗ ಖಾಲಿ ಇದೆ ಎಂಬ ಅಂಶವನ್ನು ಒಪ್ಪಿಕೊಂಡಿದ್ದಾರೆ ಹಾಗೂ ಇತರೆ ಸಲಹೆಗಳನ್ನು ಅಲ್ಲಗಳೆದಿರುವುದು ಕಂಡುಬರುತ್ತದೆ.

**11.** ಫಿರ್ಯಾಸಾ-4 ರವರು ತಮ್ಮ ನುಡಿ ಸಾಕ್ಷಿಯಲ್ಲಿ ದಿನಾಂಕಃ 09.06.2021 ರಂದು ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಚಾಸಾ-1 ರವರು ಬೆಳಿಗ್ಗೆ 6.45 ಗಂಟೆ ಸಮಯದಲ್ಲಿ ಅವರ ಜೊತೆಯಲ್ಲಿ ತಾನು ದಾಳಿಗೆ ಹೋದೆ. ತನ್ನ ಜೊತೆಯಲ್ಲಿ ಚಾಸಾ-4 ಮತ್ತು 5 ರವರು ಬಂದಿದ್ದರು. ಕಲ್ಲಹಳ್ಳಿ ಗ್ರಾಮದ ಕಡೆ ಗಸ್ತು ಮಾಡುತ್ತಿದ್ದಾಗ ಬೆಳಿಗ್ಗೆ 7.00 ಗಂಟೆ ಸಮಯದಲ್ಲಿ ಖಚಿತ ವರ್ತಮಾನ ವರದಿ ಚಾಸಾ-1 ರವರಿಗೆ ಬಂದ ಮೇರೆಗೆ, ದಾಳಿ ಮಾಡಬೇಕೆಂದು ಹೇಳಿ ಚಾಸಾ-2 ಮತ್ತು 3 ರವರನ್ನು ಪಂಚರನ್ನಾಗಿ ಜೊತೆಯಲ್ಲಿ ಕರೆದುಕೊಂಡು

ಕಲ್ಲಹಳ್ಳಿ ಬಸ್ ನಿಲ್ದಾಣದ ಬಳಿ ಹೋದಾಗ ಒಬ್ಬ ಅಸಾಮಿಯೂ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ಹಿಡಿದುಕೊಂಡು ಬರುತ್ತಿದ್ದಾಗ, ಪಂಚರ ಸಮಕ್ಷಮ ಹಿಡಿದು ವಿಚಾರಿಸಲಾಗಿ, ಪ್ಲಾಸ್ಟಿಕ್ ಚೀಲದಲ್ಲಿ ಏನಿದೆ ಕೇಳಿದಾಗ ಮದ್ಯ ತುಂಬಿದ ಟೆಟ್ರಾ ಪೌಚ್ ಗಳಿರುವುದಾಗಿ ತಿಳಿಸಿದನು. ಅದನ್ನು ತೆಗೆದುಕೊಂಡು ಹೋಗಲು ರಹದಾರಿ ಇದೆಯೇ ಎಂದು ಕೇಳಿದಾಗ, ಇಲ್ಲ ಎಂದು ಹೇಳಿದನು. ಅದನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿದನು. ಆ ಚೀಲವನ್ನು ಪರಿಶೀಲಿಸಿದಾಗ ಒಟ್ಟು 30 ಪೌಚ್ ಗಳಿದ್ದು, ಆ ಪೈಕಿ 90 ಎಂ.ಎಲ್.ನ ಹೈವಾರ್ಡ್ ಚಿಯರ್ಸ್ ವಿಸ್ಕಿಯ 20 ಟೆಟ್ರಾ ಪ್ಯಾಕ್ ಗಳು ಮತ್ತು 90 ಎಂ.ಎಲ್.ನ ಓರಿಜಿನಲ್ ಚಾಯ್ಸ್ ವಿಸ್ಕಿಯ 10 ಟೆಟ್ರಾ ಪ್ಯಾಕ್ ಗಳು ಇದ್ದು ಅವುಗಳ ಮುಖಬೆಲೆ ರೂ.35.13 ಗಳಿದ್ದು, ಅದರ ಮೇಲೆ ಅಬಕಾರಿ ಕಮೀಷನರ್ ರವರ ಸೀಲು ಮತ್ತು ಸಹಿ ಪ್ರತಿ ಪೌಚ್‌ಗಳ ಮೇಲಿತ್ತು. ಅದರ ಒಟ್ಟು ಬೆಲೆ ರೂ.1,053/- ಆಗಿತ್ತು. ನಂತರ ಅದನ್ನು ರಾಸಾಯನಿಕ ಪರೀಕ್ಷೆಗಾಗಿ 30 ಪೌಚ್ ಗಳನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ದಾರದಿಂದ ಕಟ್ಟಿ "B" ಎಂಬ ಇಂಗ್ಲೀಷ್ ಅಕ್ಷದಿಂದ ಸೀಲು ಮಾಡಲಾಯಿತು. ಆಸಾಮಿಯನ್ನು ವಿಚಾರಿಸಿದಾಗ ಉಮೇಶ ಬಿನ್ ಲೇಟ್ ಮಹದೇವಯ್ಯ, 40 ವರ್ಷ ಕಲ್ಲಹಳ್ಳಿ ಗ್ರಾಮ ಎಂದು ತಿಳಿಸಿದನು. ನಂತರ ಬೆಃ 7.20 ರಿಂದ 8.20 ರವರೆಗೆ ಮಹಜರ್ ಬರೆದು ಅವುಗಳನ್ನು ವಶಪಡಿಸಿಕೊಳ್ಳಲಾಯಿತು. ಠಾಣೆಗೆ ಅವುಗಳೊಂದಿಗೆ ಮತ್ತು ಆರೋಪಿಯನ್ನು ಕರೆದುಕೊಂಡು ಬೆಳಿಗ್ಗೆ 8.40 ಗಂಟೆ ಸಮಯದಲ್ಲಿ ಬಂದು ಠಾಣಾಧಿಕಾರಿಯ ಮುಂದೆ ಹಾಜರು ಮಾಡಿದೆವು. ದಿನಾಂಕ 21.06.2021 ರಂದು ಠಾಣಾಧಿಕಾರಿಗಳು ಈ ಪ್ರಕರಣದಲ್ಲಿ ಅಮಾನತ್ತುಪಡಿಸಿ ಕೊಂಡಿರುವ ಪೌಚ್ ಗಳನ್ನು RFSL ಮೈಸೂರಿಗೆ ರಾಸಾಯನಿಕ ಪರೀಕ್ಷೆಗಾಗಿ ಕೊಟ್ಟು ಸ್ವೀಕೃತಿ ಪಡೆದು ತನಿಖಾಧಿಕಾರಿ ಮುಂದೆ ಕೊಟ್ಟಿದ್ದೇನೆ ಹಾಗೂ ತಾನು ಈ ಬಗ್ಗೆ ಹೇಳಿಕೆ ಕೊಟ್ಟಿದ್ದೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ನಿಪಿ-1 ರಲ್ಲಿರುವ ಸಹಿಯನ್ನು ನಿಪಿ-1(ಡಿ) ಎಂದು

ಹಾಗೂ ಮು.ಮಾ–1 ಮತ್ತು 2 ನ್ನು ನೋಡಿ ಗುರುತಿಸಿದ್ದಾರೆ ಹಾಗೂ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿಕೊಂಡಿದ್ದಾರೆ.

ಆರೋಪಿ ಪರ ವಕೀಲರ ಪಾಟೀ ಸವಾಲಿನಲ್ಲಿ ಕಲ್ಲಹಳ್ಳಿ ಗ್ರಾಮದಲ್ಲಿದ್ದಾಗ ಮಾಹಿತಿ ಬಂದಿತ್ತು. ಮಾಹಿತಿ ಬಂದಾಗ ಗ್ರಾಮದ ಒಳಗಡೆ ಇದ್ದೆವು. ಈ ಹಿಂದೆ ತಾನಾಗಲೀ, ಚಾಸಾ–1 ರವರಾಗಲೀ ಆರೋಪಿಯನ್ನು ನೋಡಿರಲಿಲ್ಲ. ಆರೋಪಿಯ ಚಹರೆಯನ್ನು ಕೊಟ್ಟಿರಲಿಲ್ಲ. ಆರೋಪಿಯು ಯಾವ ಬಣ್ಣದ ಬಟ್ಟೆ ಹಾಕಿದ್ದನು. ನಿಪಿ–1 ನ್ನು ಚಾಸಾ–1 ರವರು ಬರೆದರು. 30 ಪೌಚ್‌ಗಳ ಮೇಲೆ ಕ್ರಮ ಸಂಖ್ಯೆ ಇದೆ, ನಿಪಿ–1ರಲ್ಲಿ ಆ ಸಂಖ್ಯೆಯನ್ನು ಕಾಣಿಸಲಿಲ್ಲ ಎಂಬ ಅಂಶಗಳನ್ನು ಒಪ್ಪಿಕೊಂಡು ಇತರೆ ಸಲಹೆಗಳನ್ನು ಅಲ್ಲಗಳೆದಿರುತ್ತಾರೆ.

**12.** ಈ ಮೇಲೆ ನುಡಿದ ಫ್ರಾಸಾ–1 ಮತ್ತು 2 ರವರು ಸ್ವತಂತ್ರ ಸಾಕ್ಷಿದಾರರಾಗಿರುವುದು ಕಂಡುಬರುತ್ತದೆ. ಫ್ರಾಸಾ–3 ಮತ್ತು 4 ರವರು ಕಛೇರಿ ಸಾಕ್ಷಿದಾರರಾಗಿರುವುದು ಕಂಡುಬರುತ್ತದೆ. ನಿಪಿ.1 ಮಹಜರ್ ಸಾಕ್ಷಿದಾರಾದ ಫ್ರಾಸಾ–1 ಮತ್ತು 2 ರವರು ಅಭಿಯೋಜನೆ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದು ಪ್ರತಿಕೂಲ ಸಾಕ್ಷಿದಾರರಾಗಿ ಮೂಡಿಬಂದಿರುತ್ತಾರೆ. ಪ್ರಮುಖವಾಗಿ ನಿಪಿ.1 ನ್ನು ದಿನಾಂಕ 09.06.2021 ರಂದು ಕಲ್ಲಹಳ್ಳಿ ಗ್ರಾಮದ ಬಸ್ ನಿಲ್ದಾಣದ ಮುಂಭಾಗ ರಸ್ತೆಯಲ್ಲಿ ಪಂಚಾಯ್ತುದಾರರ ಸಮಕ್ಷಮ ನಡೆಸಿರುವುದಾಗಿ ನಮೂದು ಮಾಡಿರುತ್ತಾರೆ. ಆದರೆ ಫ್ರಾಸಾ–1 ಮತ್ತು 2 ರವರು ಮಹಜರ್ ಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುವುದಾಗಿ ನುಡಿದಿರುವುದು ಕಂಡುಬರುತ್ತದೆ. ಆದ್ದರಿಂದ ನಿಪಿ.1 ಸಂಶಯದಿಂದ ಕೂಡಿರುವುದು ಕಂಡುಬರುತ್ತದೆ. ಫ್ರಾಸಾ–3 ಪ್ರಕರಣದ ಫಿರ್ಯಾದುದಾರರಾಗಿರುತ್ತಾರೆ. ಬಸ್ ನಿಲ್ದಾಣದಲ್ಲಿ ಯಾವುದೇ ಪ್ರಯಾಣಿಕರು ಇರಲಿಲ್ಲ. ಆರೋಪಿಯನ್ನು ಅದಕ್ಕಿಂತ ಪೂರ್ವದಲ್ಲಿ ನ ತಾನು ನೋಡಲಿಲ್ಲ. ಆರೋಪಿಯು ಒಂದು ಬಿಳಿ ಚೀಲದಲ್ಲಿ ಪೌಚ್ ಗಳನ್ನು ಹಿಡಿದುಕೊಂಡು ಬರುತ್ತಿದ್ದಾನೆ ಎಂದು ಮಾಹಿತಿ ಬಂದಿತ್ತು. ನಿಪಿ–1 ರಲ್ಲಿ ಬ್ಯಾಚ್ ಸಂಖ್ಯೆ ಹಾಗೂ ತಯಾರು ಮಾಡಿದ ಸಂಖ್ಯೆಯನ್ನು

ನಮೂದು ಮಾಡಲು ಯಾವುದೇ ತೊಂದರೆ ಇರಲಿಲ್ಲ. ನಿಪಿ-1 ರಲ್ಲಿ ಅವುಗಳನ್ನು ಬ್ಯಾಚ್ ಸಂಖ್ಯೆ ಹಾಗೂ ತಯಾರು ಮಾಡಿದ ಸಂಖ್ಯೆಯನ್ನು ಕಾಣಿಸಲಿಲ್ಲ ಎಂದು ನುಡಿದಿರುವುದು ಇವರ ಸಾಕ್ಷ್ಯವು ಅನುಮಾನ ವ್ಯಕ್ತವಾಗುತ್ತದೆ. ಚಾಸಾ-4 ರವರು ನಿಪಿ-1 ನ್ನು ಬರೆದರು ಫ್ರಾಸಾ-3 ರವರು ನುಡಿದರ, ಫ್ರಾಸಾ-4 ರವರು ನಿಪಿ.1 ನ್ನು ಚಾಸಾ-1 ರವರು ಬರೆದಿರುತ್ತಾರೆ ಎಂದು ನುಡಿರುವುದು ಅಭಿಯೋಜನೆ ಪ್ರಕರಣವು ಸಂಶಯ ಮೂಡುತ್ತದೆ. ನಿಪಿ-1 ರಲ್ಲಿ ಎರಡು ಸಾಕ್ಷಿದಾರರ ನಡುವೆ ಜಾಗ ಖಾಲಿ ಇದೆ ಎಂಬ ಅಂಶವನ್ನು ಒಪ್ಪಿಕೊಂಡಿರುವುದರಿಂದ ಸ್ಥಳದಲ್ಲಿ ಪಂಚಾಯಿತಿದಾರರ ಸಮಕ್ಷಮ ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದು ನಂಬಲು ಸಾಧ್ಯವಾಗುವುದಿಲ್ಲ. ಫ್ರಾಸಾ-4 ರವರು ದಾಳಿ ಕಾಲದಲ್ಲಿ ಹಾಜರಿದ್ದ ಸಾಕ್ಷಿದಾರರಾಗಿರುತ್ತಾರೆ. ಇವರು ಕಲ್ಲಹಳ್ಳಿ ಗ್ರಾಮದಲ್ಲಿದ್ದಾಗ ಮಾಹಿತಿ ಬಂದಿತ್ತು. ಮಾಹಿತಿ ಬಂದಾಗ ಗ್ರಾಮದ ಒಳಗಡೆ ಇದ್ದೆವು. ಈ ಹಿಂದೆ ತಾನಾಗಲೀ, ಚಾಸಾ-1 ರವರಾಗಲೀ ಆರೋಪಿಯನ್ನು ನೋಡಿರಲಿಲ್ಲ. ಆರೋಪಿಯ ಚಹರೆಯನ್ನು ಕೊಟ್ಟಿರಲಿಲ್ಲ. ಆರೋಪಿಯು ಯಾವ ಬಣ್ಣದ ಬಟ್ಟೆ ಹಾಕಿದ್ದನು. 30 ಪೌಚ್‌ಗಳ ಮೇಲೆ ಕ್ರಮ ಸಂಖ್ಯೆ ಇದೆ ಎಂದು ಒಪ್ಪಿಕೊಂಡು, ನಿಪಿ-1ರಲ್ಲಿ ಆ ಸಂಖ್ಯೆಯನ್ನು ಕಾಣಿಸಲಿಲ್ಲ ಎಂದು ನುಡಿದಿರುವುದು ಸಹ ಇವರ ಸಾಕ್ಷ್ಯವು ಅನುಮಾನದಿಂದ ಕೂಡಿರುತ್ತದೆ. ಪ್ರಮುಖವಾಗಿ ತನಿಖಾಧಿಕಾರಿಯಾದ ಚಾಸಾ-8 ರವರು ಪ್ರಕರಣ ವಿಚಾರಣೆ ಹಂತದಲ್ಲಿರುವಾಗ ಮೃತ ಪಟ್ಟಿರುವುದಾಗಿ ಮರಣ ಪ್ರಮಾಣ ಪತ್ರವನ್ನು ಹಾಜರು ಪಡಿಸಿ ವರದಿ ಮಾಡಿಕೊಂಡಿರುವುದರಿಂದ ಅಭಿಯೋಜನೆ ಪ್ರಕರಣವು ಸಾಕಷ್ಟು ಸಾಕ್ಷ್ಯದ ಕೊರತೆಯಿಂದ ಕೂಡಿರುವುದು ಕಂಡುಬರುತ್ತದೆ.

**13.** ಈ ಮೇಲೆ ವಿವರವಾಗಿ ಚರ್ಚಿಸಿದ ಕಾರಣದಿಂದಾಗಿ ನ್ಯಾಯಾಲಯದ ಗಮನಕ್ಕೆ ಕಂಡುಬರುವ ಅಂಶಗಳೆಂದರೇ,

- ಪಂಚರರಾದ ಫ್ರಾಸಾ-1 ಮತ್ತು 2 ರವರು ನಿಪಿ.1 ನ್ನು ಜುರುಗಿಸುವ ಸಮಯದಲ್ಲಿ ಹಾಜರಾಗಿ ಸಹಿ ಮಾಡಿರುವ ಬಗ್ಗೆ ನಿಪಿ.1 ರಲ್ಲಿ ನಮೂದು ಇದ್ದರು ಹಾಗೂ ನಿಪಿ2ಮತ್ತು 3 ರಂತೆ ಹೇಳಿಕೆ ನೀಡಿದ್ದರು ಸಹ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷಿದಾರರಾಗಿರುವುದು ಕಂಡುಬರುತ್ತದೆ.
- ಫ್ರಾಸಾ-3 ಮತ್ತು 4 ರವರು ನಿಪಿ-1 ರಲ್ಲಿ ಬ್ಯಾಚ್ ಸಂಖ್ಯೆ ಹಾಗೂ ತಯಾರು ಮಾಡಿದ ಸಂಖ್ಯೆಯನ್ನು ಕಾಣಿಸಲಿಲ್ಲ ಎಂದು ನುಡಿದಿರುವುದು ಕಂಡುಬರುತ್ತದೆ.
- ತನಿಖಾಧಿಕಾರಿಯು ವಿಚಾರಣಾ ಹಂತದಲ್ಲಿ ಮೃತರಾಗಿರುವುದರಿಂದ ಸ್ಪಷ್ಟ ಸಾಕ್ಷ್ಯವು ಹೊರಹೊಮ್ಮಿರುವುದಿಲ್ಲ.
- ನಿಪಿ.1 ರಲ್ಲಿ ಆರೋಪಿಯು ಯಾವುದೇ ಪರವಾನಗಿ ಹೊಂದಿರುವುದಿಲ್ಲ ಹಾಗೂ ಮದ್ಯದ ಪೌಚುಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಸಲುವಾಗಿ ಸಾಗಾಣಿಕೆ ಮಾಡುತ್ತಿರುವುದಾಗಿ ತಿಳಿಸಿದ್ದು ಹಾಗೂ ನಿಪಿ.5 ರಲ್ಲಿ ಮದ್ಯದ ಪೌಚುಗಳಲ್ಲಿ ಎಥೆನಾಲ್ ಇರುವಿಕೆ ಪತ್ತೆಯಾಗಿದೆ ಎಂದು ವರದಿ ನೀಡಿದ್ದರು, ಅಭಿಯೋಜನೆ ಪ್ರಕಣದಲ್ಲಿ ಆರೋಪಿಯು ಎಲ್ಲಿಂದ ಮದ್ಯದ ಪೌಚುಗಳನ್ನು ಖರೀದಿ ಮಾಡಿಕೊಂಡು ಬರುತ್ತಿದ್ದ ಎಂಬುದರ ಬಗ್ಗೆ ತನಿಖೆ ಮಾಡಿರುವುದಿಲ್ಲ ಹಾಗೂ ಅದರ ಬಗ್ಗೆ ಇಡೀ ಅಭಿಯೋಜನೆ ಪ್ರಕರಣದಲ್ಲಿ ಕಂಡುಬರುವುದಿಲ್ಲ.
- ಫ್ರಾಸಾ-3 ರವರು ಠಾಣೆಯನ್ನು ಬೆಳಿಗ್ಗೆ 6.30 ಗಂಟೆಗೆ ಬಿಟ್ಟಿರುವುದಾಗಿ ಸಾಕ್ಷಿ ನುಡಿದಿದ್ದರು, ನಿಪಿ.4 ರಲ್ಲಿ 6.45 ಗಂಟೆಗೆ ಠಾಣೆಯಿಂದ ಹೊರಟ್ಟಿರುವುದಾಗಿ ನಮೂದಿಸಿರುವುದು ಕಂಡುಬರುತ್ತದೆ.
- ನಿಪಿ.1 ರಲ್ಲಿ ಆರೋಪಿಯನ್ನು ಪಂಚರ ಸಮಕ್ಷಮ ಹಿಡಿದಿರುವುದಾಗಿ ಹೇಳಿರುತ್ತಾರೆ. ಆದರೆ ಪಂಚರರು ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ ಹಾಗೂ ನಿಪಿ.1 ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುವುದಾಗಿ ಸಾಕ್ಷಿ ನುಡಿದಿರುವುದರಿಂದ ಪಂಚರ ಸಮಕ್ಷಮ ಆರೋಪಿಯನ್ನು

ಹಿಡಿದಿರುತ್ತಾರೆ ಎಂಬುದು ಅನುಮಾನದಿಂದ ಕೂಡಿರುತ್ತದೆ. ನುಡಿದ ಫ್ರಾಸಾ–1 ರಿಂದ 4 ರವರ ಸಾಕ್ಷ್ಯವು ಒಂದಕ್ಕೊಂದು ಒಂದಕ್ಕೊಂದು ವ್ಯತ್ಯಾಸ ಇರುವುದು ಕಂಡುಬರುತ್ತದೆ. ಅದು ಅಲ್ಲದೆ ಫ್ರಾಸಾ–1 ಮತ್ತು 2 ರವರು ಒಂದೇ ಊರಿನವರಾಗಿರುವುದು ಕಂಡುಬರುತ್ತದೆ.

ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ಅಭಿಯೋಜನೆ ಪ್ರಕರಣವು ಆರೋಪಿಯ ವಿರುದ್ಧ ಮಾಡಲಾದ ಆರೋಪವನ್ನು ನಿಸ್ಸಂಶಯವಾಗಿ ನಿರೂಪಿಸಲು ವಿಫಲರಾಗಿರುತ್ತಾರೆ. ಆದ್ದರಿಂದ ಆರೋಪಿ ತಪ್ಪಿತಸ್ಥನೆಂದು ನಿರ್ಧರಿಸಲು ನ್ಯಾಯಾಲಯದ ಮುಂದೆ ಸ್ಪಷ್ಟವಾದ ಸಾಕ್ಷ್ಯಾಧಾರಗಳು ಕಂಡುಬರುವುದಿಲ್ಲವಾದ್ದರಿಂದ, ಸಂಶಯದ ಲಾಭವನ್ನು ಆರೋಪಿಗೆ ನೀಡಲಾಯಿತು. ಹೀಗಾಗಿ ಅಭಿಯೋಜನೆಯವರು ಆರೋಪಿ ಮೇಲೆ ಹೊರಿಸಲಾಗಿರುವ ಆಪಾದನೆಗಳನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ಸಂಪೂರ್ಣವಾಗಿ ವಿಫಲರಾಗಿರುತ್ತಾರೆಂದು ತೀರ್ಮಾನಿಸಿ ಮೇಲ್ಕಂಡ **ಅಂಶ ಸಂಖ್ಯೆ: 1 ಕ್ಕೆ ನಕರಾತ್ಮಕವಾಗಿ** ಉತ್ತರಿಸಿ ಈ ಕೆಳಕಂಡಂತೆ ಆದೇಶ ಮಾಡುತ್ತೇನೆ.

14. **ಅಂಶ ಸಂಖ್ಯೆ 2**: ಈ ಮೇಲ್ಕಂಡ ಅಂಶಗಳಲ್ಲಿ ಚರ್ಚಿಸಲಾದ ಕಾರಣಗಳಿಗಾಗಿ ಈ ಅಂತಿಮ ಆದೇಶ ಈ ಕೆಳಕಂಡಂತೆ:–

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 1973 ಕಲಂ 248(1) ರ ಅಡಿಯಲ್ಲಿ ಆರೋಪಿಯನ್ನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 1965 ರ ಕಲಂ 32, 34 ರ ಅಪಾದನೆಗಳಿಂದ ದೋಷಮುಕ್ತಗೊಳಿಸಿ ಖುಲಾಸೆ ಮಾಡಲಾಗಿದೆ.

ಆರೋಪಿ ಹಾಗೂ ಜಾಮೀನುದಾರರ ಜಾಮೀನು ಮುಚ್ಚಳಿಕೆ ಪತ್ರಗಳನ್ನು ರದ್ದುಪಡಿಸಲಾಗಿದೆ.

ಈ ಪ್ರಕರಣದ ಮುದ್ದೆ ಮಾಲು - 1 ಮತ್ತು 2 ಯಾವುದೇ ಮೌಲ್ಯಯುತ ವಸ್ತುಗಳಲ್ಲದ ಕಾರಣ ಅವುಗಳನ್ನು ಮೇಲ್ಮನವಿಯ ಅವಧಿ ಮುಗಿದ ನಂತರ ನಾಶ ಪಡಿಸಲು ಆದೇಶಿಸಿದೆ.

(ಶೀಘ್ರಲಿಪಿಗಾರನಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟಿದ್ದು, ಬಳಿಕ ಅನುಲಿಪಿಯನ್ನು ಪರಿಶೀಲಿಸಿ, ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ಈ ದಿನ ಅಂದರೆ ದಿನಾಂಕ **22ನೇ ಫೆಬ್ರವರಿ** 2025 ರಂದು ಘೋಷಿಸಿದ್ದೇನೆ.)

**(ಬಿ. ಎಸ್. ಹೊನ್ನಸ್ವಾಮಿ )**
**ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ ಜೆ ಎಂ.**
**ಚಾಮರಾಜನಗರ**

**:: ಅನುಬಂಧ ::**

**1. ಅಭಿಯೋಜನಾ ಪರ ವಿಚಾರಣೆ ಮಾಡಲಾದ ಸಾಕ್ಷಿಗಳು :**

ಪ್ರಾಸಾ-1 : ರೂಪೇಶ್
ಪ್ರಾಸಾ-2 : ರಾಜೇಶ್
ಪ್ರಾಸಾ-3 : ಬಿ.ಪುಟ್ಟಸ್ವಾಮಿ
ಪ್ರಾಸಾ-4 : ಮೋಹನ ಕುಮಾರ

**2. ಅಭಿಯೋಜನಾ ಪರ ಹಾಜರು ಪಡಿಸಿದ ದಾಖಲೆಗಳು :**

ನಿಶಾನೆ ಪಿ-1 : ಸ್ಥಳ ಮಹಜರ್
ನಿಶಾನೆ ಪಿ-1(ಎ) ರಿಂದ 1(ಸಿ): ಸಹಿಗಳು
ನಿಶಾನೆ ಪಿ-2 ಮತ್ತು 3 : ಹೇಳಿಕೆಗಳು
ನಿಶಾನೆ ಪಿ-4 : ಸ್ವ ವರದಿ
ನಿಶಾನೆ ಪಿ-4(ಎ) : ಸಹಿ.
ನಿಶಾನೆ ಪಿ-5 : ಆರ್.ಎಫ್.ಎಸ್.ಎಲ್ ವರದಿ

**3. ಆರೋಪಿ ಪರ ವಿಚಾರಣೆ ಮಾಡಲಾದ ಸಾಕ್ಷಿಗಳು :**

-ಇಲ್ಲಾ-

**4. ಆರೋಪಿ ಪರ ಹಾಜರುಪಡಿಸಿದ ದಾಖಲೆಗಳು :**

–ಇಲ್ಲಾ–

**5. ಅಭಿಯೋಜನೆಯವರ ಪರ ಗುರುತಿಸಲಾದ ಮುದ್ದೆಮಾಲು ಪಟ್ಟಿ:**

ಮುದ್ದೆ ಮಾಲು ಸಂಖ್ಯೆ :1 ಮತ್ತು 2 : 30 ಟೆಟ್ರಾ ಪ್ಯಾಕ್ ಗಳು
ಹಾಗೂ ಒಂದು ಪ್ಲಾಸ್ಟಿಕ್ ಚೀಲ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ ಜೆ ಎಂ.**
**ಚಾಮರಾಜನಗರ**

Visit **ecourts.gov.in** for updates or download mobile app “**eCourts Services**” from Android or iOS